ಸರ್ಕಾರಿ ಉಪಕರಣಾಗಾರ ತರಬೇತಿ ಕೇಂದ್ರದಲ್ಲಿ ಸಬ್ ಕಾಂಟ್ರಾಕ್ಟ್

2118 (2527) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಸಾಕಷ್ಟು ಕೆಲಸಗಾರರಿದ್ದು ಅವರೇ ಕೆಲಸವಿಲ್ಲದೇ ಕೈ ಕಟ್ಟಿ ಕುಳಿತಿರುವಾಗ ಸಬ್ ಕಾಂಟ್ರಾಕ್ಟ್ ಆಧಾರದ ಮೇಲೆ ಉಪ ಗುತ್ತಿಗೆದಾರರಿಗೆ ಕೆಲಸವನ್ನು ನಿರ್ವಹಿಸುತ್ತಿರುವುದು ನಿಜವೇ;

ಆ) ನಿಜವಿದ್ದಲ್ಲಿ, ಸಾಕಷ್ಟು ಕೆಲಸಗಾರರು ನಿರುದ್ಯೋಗಿಗಳಾಗಿ ಕುಳಿತಿದ್ದರೂ ಸಹ ಉಪ ಗುತ್ತಿಗೆದಾರರಿಗೆ ಕೊಡುವ ಉದ್ದೇಶವೇನು;

ಇ) ಸಬ್ ಕಾಂಟ್ರಾಕ್ಟ್ ಕೊಡುವಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸದರಿ ಕಾರ್ಯಾಗಾರ ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಷ್ಟದಲ್ಲಿ ಬರಲು ಕಾರಣಗಳೇನು; ನಷ್ಟ ಅನುಭವಿಸಲು ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು):

ಅ) ಸೌಲಭ್ಯದ ಕೊರತೆ ಅಥವಾ ಕೆಲಸದ ಒತ್ತಡಗಳಿದ್ದಾಗ ಮಾತ್ರ ಉಪಗುತ್ತಿಗೆದಾರರಿಂದ ಕೆಲಸವನ್ನು ನಿರ್ವಹಿಸುತ್ತಿರುವುದು ನಿಜ.

ಆ) ಜಿ.ಟಿ.ಟಿ.ಸಿ. ಸಂಸ್ಥೆಯಲ್ಲಿ ಉತ್ಪಾದಿಸುವ ಬಿಡಿಭಾಗಗಳು ಅತ್ಯಂತ ಉತ್ಕೃಷ್ಟ, ತಾಂತ್ರಿಕತೆಯಿಂದ ಕೂಡಿರುತ್ತದೆ. ಯಾವ ಸಂದರ್ಭದಲ್ಲಿ ಯಂತ್ರೋಪಕರಣ ಸಾಮರ್ಥ್ಯದ ಕೊರತೆ ಅಥವಾ ಕೆಲಸದ ಒತ್ತಡದಿಂದ ಸೌಲಭ್ಯದ ಕೊರತೆ ಇರುವುದೋ ಅಂತಹ ಸಂದರ್ಭದಲ್ಲಿ ಉಪ ಗುತ್ತಿಗೆ ನೀಡುವುದು ಅನಿವಾರ್ಯವಾಗಿದೆ.

ಇ) ಜಿ.ಟಿ.ಟಿ.ಸಿ. ಸಂಸ್ಥೆಯ ಮೇಲಿನ ಕೆಲವಾರು ಆರೋಪಗಳ ತನಿಖೆಗಾಗಿ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಪರಿಶೀಲಿಸುವುದು.

ಈ) ಇಲ್ಲ.

ವಿವಿಧ ನಿಗಮ ಮಂಡಳಿಗಳಿಗೆ ಸದಸ್ಯರು ಮತ್ತು ನಿರ್ದೇಶಕರನ್ನು ನೇಮಕ ಮಾಡುವಾಗ ಜೈನ ಸಮುದಾಯವನ್ನು ನಿರ್ಲಕ್ಷಿಸಿರುವ ಬಗ್ಗೆ

2119 (2520) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಿವಿಧ ಆಯೋಗ, ನಿಗಮ, ಮಂಡಳಿಗಳಿಗೆ ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು ನೇಮಕ ಮಾಡುವಾಗ ಅಲ್ಪಸಂಖ್ಯಾತ ವರ್ಗಗಳಲ್ಲಿನ ಜೈನ ಜನಾಂಗದವರನ್ನು ನೇಮಕ ಮಾಡದೇ ಇರುವುದನ್ನು ಸರ್ಕಾರವು ಗಮನಿಸಿದೆಯೇ; ಗಮನಿಸಿದ್ದಲ್ಲಿ, ಆ ಕುರಿತು ಸರ್ಕಾರದ ನಿಲುವುಗಳೇನು;

ಆ) ಅಲ್ಪಸಂಖ್ಯಾತರು ಅಂದರೆ ಕೇವಲ ಮುಸ್ಲಿಂ ಮತ್ತು ಕ್ರೈಸ್ತ ಜನಾಂಗದವರನ್ನು ಮಾತ್ರ ಆದ್ಯತೆಗೆ ಪರಿಗಣಿಸಿ ಜೈನ ಜನಾಂಗದವರನ್ನು ನಿರ್ಲಕ್ಷಿಸುವುದನ್ನು ಇನ್ನು ಮುಂದಾದರೂ ಸರಿಪಡಿಸಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಗೆ ಜೈನ ಸಮುದಾಯಕ್ಕೆ ಸೇರಿದ ಶ್ರೀ ಪಾರಸಮಲ್ ಜೈನ್ ಎಂಬುವವರನ್ನು ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ. ಆದುದರಿಂದ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ವಿವಿಧ ನಿಗಮ, ಮಂಡಳಿಗಳಿಗೆ ನಿರ್ದೇಶಕರು ಮತ್ತು ಸದಸ್ಯರನ್ನು ನಾಮಕರಣ ಮಾಡುವಾಗ ಜೈನ ಜನಾಂಗವನ್ನು ನಿರ್ಲಕ್ಷಿಸಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಬೆಳೆದಿರುವ ಕಬ್ಬಿನ ಬಗ್ಗೆ

2120 (2287) ಶ್ರೀ ಪ್ರಕಾಶ ಖಂಡ್ರೆ (ಭಾಲ್ಕಿ): ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿನ ಕಬ್ಬು ಹೊರ ರಾಜ್ಯಕ್ಕೆ ಈ ವರ್ಷ ಸಾಗಾಣಿಕೆ ಮಾಡದಿರುವಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೀದರ್ ಜಿಲ್ಲೆಯಲ್ಲಿ ಈ ವರ್ಷ ಒಟ್ಟು ಎಷ್ಟು ಟನ್ ಕಬ್ಬು ಬೆಳೆಯಲಾಗಿದೆ? ಇಂದಿನವರೆವಿಗೂ ಜಿಲ್ಲೆಯ ಎಲ್ಲಾ ಕಾರ್ಖಾನೆಗಳು ಅರೆದಿರುವ ಪ್ರಮಾಣ ಎಷ್ಟು;

ಇ) ಇನ್ನೂ ರೈತರ ಹತ್ತಿರ ಎಷ್ಟು ಟನ್ ಹಾಗೆ ಉಳಿದಿದೆ. ರೈತರ ಹತ್ತಿರ ಹೆಚ್ಚು ಪ್ರಮಾಣದ ಕಬ್ಬು ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ರೈತರಿಗೆ ವಿದ್ಯುತ್ ಸಮಸ್ಯೆಯಿಂದ ನೀರು ಬಿಡದೆ ಕಬ್ಬು ಒಣಗುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇಂತಹ ಸಮಯದಲ್ಲಿ ಜಿಲ್ಲೆಯ ಕಾರ್ಖಾನೆಗಳು ಪೂರ್ತಿ ಬೆಳೆಸಿರುವ ಕಬ್ಬನ್ನು ಸಾಗಿಸದೇ ಇರುವಂತಹ ಪರಿಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ರೈತರ ಕಬ್ಬು ಜಿಲ್ಲಾ ಕಾರ್ಖಾನೆಗಳಲ್ಲಿ ತೆಗೆದುಕೊಳ್ಳದೇ ಇದ್ದ ಪರಿಸ್ಥಿತಿಯಲ್ಲಿ ಉಳಿದ ಕಬ್ಬಿಗೆ ಸರ್ಕಾರದಿಂದ ರೈತರಿಗೆ ಪರಿಹಾರ ಒದಗಿಸಲಾಗುವುದೇ? ಪ್ರತಿ ಎಕರೆಗೆ ಎಷ್ಟು ಪ್ರಮಾಣದ ಪರಿಹಾರ ನೀಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಬಂದಿದೆ.

ಆ) ಬೀದರ್ ಜಿಲ್ಲೆಯಲ್ಲಿ ಈ ವರ್ಷ ಅಂದಾಜು 14 ಲಕ್ಷ ಟನ್ ಕಬ್ಬು ಬೆಳೆಯಲಾಗಿದ್ದು, ಅದರ ವಿಲೇವಾರಿ ಈ ಕೆಳಕಂಡಂತಿದೆ.

1) ಜಿಲ್ಲೆಯ 2 ಕಾರ್ಖಾನೆಗಳು ಈಗಾಗಲೇ 7.25 ಲಕ್ಷ ಟನ್ ಕಬ್ಬು ನುರಿಸಿದ್ದು, ಈ ಎರಡು ಕಾರ್ಖಾನೆಗಳು ಇನ್ನೂ 2.00 ಲಕ್ಷ ಟನ್ ಕಬ್ಬು ನುರಿಸುತ್ತವೆ.
2) ಜಿಲ್ಲೆಯ ಖಂಡ ಸಾರಿ ಘಟಕಗಳಿಗೆ ಬೆಲ್ಲ ಮತ್ತು ಬೀಜೋತ್ಪಾದನೆಗೆ ಸುಮಾರು 4.75 ಲಕ್ಷ ಟನ್ ಉಪಯೋಗವಾಗುವ ಅಂದಾಜಿದೆ.

ಇ) ಮೇಲ್ಕಂಡ 1 ಮತ್ತು 2ನೇ ಅಂಶಗಳ ರೀತ್ಯಾ ಕಬ್ಬು ನುರಿಸುವುದರಿಂದ ರೈತರ ಹತ್ತಿರ ಹೆಚ್ಚು ಪ್ರಮಾಣದ ಕಬ್ಬು ಉಳಿಯಲಾರದು.